(INTERRUPTIONS)

ಶ್ರೀ ರಾಮಕೃಷ್ಣ ಹೆಗಡೆ.—ಅದರ ಕಾರಣ ಕನ್ನಡ ಅವರಿಗೆ ಬರುವುದಿಲ್ಲ ಎಂದು ಅಲ್ಲ. ಪ್ರತಿಯೊಬ್ಬರಿಗೂ ಕನ್ನಡ ಬರುತ್ತದೆ. ಈ ಪಾತನ್ನು ನಾವು ಒಪ್ಪಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಇಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಕನ್ನಡ ಕಲಿಯಲು ಅವರಿಗೆ ಯಾವ ತರಹದ ಅನುಕೂಲತೆಗಳು ಬೇಕೋ, ಅದನ್ನು ನಾನು ಕಲ್ಪಿಸಿಕೊಡುತ್ತೇನೆ.

(ಶ್ರೀ ಎಂ. ರಾಮಪ್ಪನವರು ಶ್ರೀಮತಿ ಮುಕ್ತರುನ್ನಿಸಾ ಬೇಗಂರವರು, ಲೈಕುದ್ದೀನ್ ರವರು ಒಮ್ಮೆಗೆ ಎದ್ದು ನಿಂತು ಅವಕಾಶ ಕೋರಿದರು)

ಅಧ್ಯಕ್ಷರು.—ಪ್ರಶ್ನೆಗೆ ಸಂಬಂಧಪಟ್ಟವರು ಪಾತನಾಡಬೇಕು. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಚೌಡಯ್ಯನವರು ಆ ಸದಸ್ಯರುಗಳವರಿಗೆ ಸ್ವಲ್ಪ ಹೇಳಬೇಕು.

SMT. MUKHTARUNNISA.—When do you extend facilities to learn kannada ?

SRI RAMKRISHNA HEGDE.—Whenever you want.

ಅಧ್ಯಕ್ಷರು.—ಅವರು ಹೇಳಿದ್ದನ್ನು ತಾವುಗಳು ಕೇಳಿಕೊಳ್ಳಿ. ಈಗ ಪಾನ್ಯ ಲಕ್ಕಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಲಿ.

SMT. MUKHTAUNNISA.—On accoount of that we are loosing employment. Most of the graduates coming out of universities belonging to minorities are not getting employment, Therefore, request the Chief minister to at least give them this facility within two years. Even the women who have passed TCH have not been absorved due to this problem.

SRI RAMAKRISHNA HEGDE.—Sir, the hon. Member Mukhtarunnisa speaks better kannada than English. The other day she has recited a kannada poem in such a way that I was very much surprised.

ಅಗ್ಗದ ದರದಲ್ಲಿ ಕಡು ಬಡವರಿಗೆ ಹಂಚುವ ಆಹಾರ ಪದಾರ್ಥ ಮತ್ತು ವಸತಿ ಬಗ್ಗೆ

೩೩. (೮೯) ಶ್ರೀ ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜುಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಅಗ್ಗದ ದರದಲ್ಲಿ ಕಡು ಬಡವರಿಗೆ ಅಕ್ಕಿ, ರಾಗಿ ಮತ್ತು ಜೋಳ ಮೊದಲಾದ ಆಹಾರ ಪದಾರ್ಥಗಳನ್ನು ಮತ್ತು ಸೀರೆ ಧೋತಿ ಹಾಗೂ ಬಟ್ಟೆಗಳನ್ನು ಹಂಚಲು ಇದುವರೆಗೆ ರಾಜ್ಯದಲ್ಲಿ ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ?

ಆ) ಹಸಿರು ಕಾರ್ಡು ಪಡೆದ ಫಲಾನುಭವಿಗಳಲ್ಲಿ ಬಹುಪಾಲು ಆರ್ಥಿಕವಾಗಿ ಅನುಕೂಲವಾಗಿರುವವರೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಬಡವರಿಗೆ ಕೊಟ್ಟಿದ್ದ ಹಸಿರು ಕಾರ್ಡುಗಳನ್ನು ಹಿಂದಕ್ಕೆ ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಾಗರೀಕ ಸರಬರಾಜು ಮಂತ್ರಿಗಳು).—

ಅ) '' ಅಗ್ಗದ ದರದಲ್ಲಿ ಧಾನ್ಯ ಹಂಚುವ ಯೋಜನೆ '' ಅಡಿಯಲ್ಲಿ ೩೦-೦೯ ಲಕ್ಷ ಗ್ರಾಮೀಣ ಕುಟುಂಬಗಳು. ಸೀರೆ ಹಾಗೂ ಧೋತಿ ಯೋಜನೆಯಡಿಯಲ್ಲಿ ೩೧,೬೯,೪೫೫ ಗಂಡಸರು ಹಾಗೂ ೩೧,೫೯,೨೨೬ ಹೆಂಗಸರು ಫಲಾನುಭವಿಗಳಾಗಿದ್ದಾರೆ.

ಆ) ಬಂದಿಲ್ಲ.

ಇ) ಬಂದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕಡು ಬಡವರಿಗೆ ಹಸಿರು ಕಾರ್ಡುಗಳ ಮೂಲಕ, ಅಗ್ಗದ ದರದಲ್ಲಿ ದವಸಧಾನ್ಯಗಳು ಮತ್ತು ಧೋತಿ, ಸೀರೆ, ಮುಂತಾದವುಗಳನ್ನು ಪಂಚತಕ್ಕಂಥ ಕಾರ್ಯಕ್ರಮವನ್ನು ಸರಕಾರದವರು ತಂದಾಗ, ಆ ಬಡವರ ಜೊತೆಯಲ್ಲಿ ತುಂಬಾ ಸಂತೋಷ ಪಟ್ಟವರಲ್ಲಿ ನಾನೂ ಒಬ್ಬ. ಆದರೆ ಹಸಿರು ಕಾರ್ಡ್‌ಗಳ ವಿತರಣೆ ಆದಾಗ ನಮಗೆ ತುಂಬಾ ನಿರಾಶೆ ಉಂಟುಮಾಡಿತು. ಏಕೆಂದರೆ ಬಡವರಿಗೆ ಮಾತ್ರ ಸಿಗಬೇಕಾಗಿದ್ದ, ಈ ಕಾರ್ಡುಗಳು, ಅನುಕೂಲಸ್ಥರಿಗೆ, ಶ್ರೀಮಂತರಿಗೆ ಸಿಕ್ಕಿತು. ಈ ವಿಚಾರದಲ್ಲಿ ನಮ್ಮಲ್ಲಿನ ಬಡವರು ನಾವು ತಹಶೀಲ್ದಾರರಿಗೆ ಜಿಲ್ಲಾಧಿಕಾರಿಯವರಿಗೆ ಬರವಣಿಗೆಯ ಮೂಲಕ ದೂರನ್ನು ಸಲ್ಲಿಸಿದ್ದೇವೆ. ಇದನ್ನು ಗಮನಿಸಿ ಚಿಕ್ಕನಾಯ್ಕನ ಹಳ್ಳಿಯ ಜನರು ಸುಮಾರು ೬,೦೦೦ ಅರ್ಜಿಗಳನ್ನು ಸರಕಾರಕ್ಕೆ ಕೊಟ್ಟರೂ ಸಹ ಆದರಲ್ಲಿ ೩,೦೭೭ ಜನರಿಗೆ ಮಾತ್ರ ಹಸಿರು ಕಾರ್ಡ್‌ಗಳನ್ನು ಹೊಸದಾಗಿ ಕೊಟ್ಟಿದ್ದಾರೆ. ಹೀಗೆ ಶ್ರೀಮಂತರಿಗೆ ಕೊಟ್ಟಂತಹ ಕಾರ್ಡ್‌ಗಳನ್ನು ಅವರಿಂದ ವಾಪಸ್ ಪಡೆದು ಅವುಗಳನ್ನು ಬಡವರಿಗೆ ಕೊಡುವಂತಹ ವಿಚಾರ ಮಾಡಬೇಕು. ಶ್ರೀಮಂತರಿಗೆ ಕಾರ್ಡ್‌ಗಳನ್ನು ಕೊಟ್ಟಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಬಹುಶಃ ಜನ ಹೇಳತಕ್ಕಂಥದ್ದನ್ನು ಈ ಶಾಸನಸಭೆಯಲ್ಲಿ ಸದಸ್ಯರಾಗಿರತಕ್ಕಂಥವರು ಹೇಳಿದರೆ ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ ಏನು ಪ್ರಯೋಜನ ? ಇದರಿಂದ ನಮಗೆ ಅನುಮಾನ ಬರುತ್ತದೆ.

ಅಧ್ಯಕ್ಷರು.—ತಾವು ಉಪಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ನನ್ನ ತಾಲ್ಲೂಕಿನಲ್ಲಿ ಸುಮಾರು ಜನರಿಗೆ ಅನುಕೂಲಸ್ಥರಿಗೆ ಹಸಿರು ಕಾರ್ಡ್ ಸಿಕ್ಕಿದೆ. ಅದನ್ನು ಸರ್ಕಾರದವರು ಪರಿಶೀಲಿಸಬೇಕು ಎಂದು ತಿಳಿಸಿದ್ದರೂ ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ತಿಳಿಸಿದ್ದೀರಿ. ದಯವಾಡಿ ಇದರ ಬಗ್ಗೆ ತನಿಖೆ ಮಾಡಿಸಿ ಯಾರಿಗೆ ಅನುಕೂಲಸ್ಥರಿಗೆ ಈ ಹಸಿರು ಕಾರ್ಡ್ ಸಿಕ್ಕಿದೆ ಅವರಿಂದ ವಾಪಸ್ಸು ತೆಗೆದುಕೊಂಡು ಬಡವರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಎರಡನೆಯದಾಗಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಡವರಿಗೆ ಕೊಟ್ಟಿದ್ದ ಹಸಿರು ಕಾರ್ಡ್‌ಗಳನ್ನು ಹಿಂದಕ್ಕೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಬಂದಿಲ್ಲ ಎಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿರುವ ಚೌಳಹಳ್ಳಿ ಮತ್ತು ಕೈದಹಳ್ಳಿ, ಈ ಎರಡು ಗ್ರಾಮಗಳಲ್ಲಿ ಬಡವರಿಗೆ ಕೊಟ್ಟಿದ್ದ ಒಂದು ಸಾವಿರ ಹಸಿರುಕಾರ್ಡುಗಳನ್ನು ವಾಪಸ್ಸು ಪಡೆಯಲಾಗಿದೆ. ಅದೇರೀತಿಯಾಗಿ ಎಲ್ಲಾ ಕಡೆಯೂ ಆಗಿದೆ. ಅವರು ಬಡವರಿಗೆ ಕೊಟ್ಟಿದ್ದ ಒಂದು ಸಾವಿರ ಹಸಿರು ಕಾರ್ಡ್‌ಗಳನ್ನು ವಾಪಸ್ಸು ತೆಗೆದುಕೊಂಡು ಮತ್ತೆ ರಿಸರ್ವ್ ಮಾಡಿಸಿ ೧೭ ಸಾವಿರ ಕಾರ್ಡುಗಳನ್ನು ಕೊಟ್ಟಿದ್ದಾರೆ. ಇವೆಲ್ಲಾ ಸಾಮಾನ್ಯವಾಗಿ ಅನುಕೂಲಸ್ಥರಿಗೆ ಸಿಕ್ಕಿದೆ. ಇದು ಬಡವರಿಗೆ ಸಿಕ್ಕಿದೆಯೋ ಇಲ್ಲವೋ ಎನ್ನುವುದನ್ನು ತನಿಖೆ ಮಾಡಿಸಬೇಕು. ಇದನ್ನು ಅವರು ಹಣಕ್ಕೆ ಮಾರಿದ್ದಾರೆ. ಶ್ರೀಪಾನ್ ರಾಮಕೃಷ್ಣ ಹೆಗಡೆಯವರು ಇಂಥಾ ಕಾರ್ಯಕ್ರಮಗಳನ್ನು ಹಾಕಿ ಫಲಾನುಭವಿಗಳನ್ನು ಗುರುತಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳಿದರೂ ಅವರನ್ನು ಸರಿಯಾಗಿ ಗುರುತಿಸದೆ ಹಣಕ್ಕಾಗಿ ಅನುಕೂಲಸ್ಥರಿಗೆ ಮಾರುತ್ತಿದ್ದಾರೆ. ಆದುದರಿಂದ ಈ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈಗಲಾದರೂ ಕೂಡ ಇದರ ಬಗ್ಗೆ ಸರಿಯಾದ ತನಿಖೆ ನಡೆಸಿ ನ್ಯಾಯವಾದ ಫಲಾನುಭವಿಗಳಿಗೆ ಬಡವರಿಗೆ ಈ ಅನುಕೂಲ ಸಿಗುವ ಹಾಗೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿಯಾಗಿ ರಾಜ್ಯದ ಎಲ್ಲಾ ಕಡೆಯೂ ನಡೆದಿದೆ ಎನ್ನುವುದು ನನ್ನ ಭಾವನೆ.

ಅಧ್ಯಕ್ಷರು.—ನಿಮಗೆ ಭಾಷಣ ಎಂದರೆ ಏನು? ಪ್ರಶ್ನೆ ಎಂದರೆ ಏನು? ಎನ್ನುವುದೇ ಗೊತ್ತಿಲ್ಲ. ಅದನ್ನು ದಯವಿಟ್ಟು ತಿಳಿದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಇದರ ಬಗ್ಗೆ ಹಲವಾರು ಆರೋಪಗಳನ್ನು ಮಾಡಿದ್ದಾರೆ. ಈ ಒಂದು ಕಾರ್ಯಕ್ರಮ ಜಾರಿಗೆ ಬಂದಾಗ ಚಿಕ್ಕನಾಯಕನಹಳ್ಳಿಯಲ್ಲಿ ಹಸಿರುಕಾರ್ಡ್

ಹಂಚುವಾಗ ಕೆಲವು ಲೋಪದೋಷಗಳನು ಆಗಿವೆ ಎಂದು ಕಂಪ್ಲೇಂಟ್ ಬಂದ ಮೇಲೆ ಮತ್ತೆ ಅದನ್ನು ರಿಸರ್ವೆ ಮಾಡಿಸಿದ್ದೇವೆ. ಹಾಗೆ ರಿಸರ್ವೆ ಮಾಡಿಸಿದ ಮೇಲೆ ಎಷ್ಟೋ ಜನಕ್ಕೆ ಹಸಿರುಕಾರ್ಡುಗಳನ್ನು ಜಾಸ್ತಿ ಕೊಟ್ಟಿದ್ದೇವೆ ಅದನ್ನೂ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಇಷ್ಟಾದರೂ ಕೂಡ ಅವರು ಅದನ್ನು ಮಾರಿಕೊಳ್ಳುತ್ತಾರೆ, ಬಡವರಿಗೆ ಹಸಿರುಕಾರ್ಡ್ ಸಿಕ್ಕಿಲ್ಲ, ಅನುಕೂಲಸ್ಥರಿಗೇ ಕಾರ್ಡ್ ಸಿಕ್ಕಿದೆ ಎಂದು ಹೇಳಿದ್ದಾರೆ. ಅದಲ್ಲದೆ ಮಾನ್ಯ ಸದಸ್ಯರು ಹೆಳಿರತಕ್ಕಂಥ ಚೌಳಹಳ್ಳಿ ಮತ್ತು ಕೈದಹಳ್ಳಿ ಈ ಎರಡು ಗ್ರಾಮಗಳಿಗೆ ಏನು ಅನ್ಯಾಯವಾಗಿದೆ ಎಂದು ಏನು ಹೇಳಿದ್ದಾರೆ, ಅದನ್ನು ಪರಿಶೀಲಿಸಿ ತಕ್ಷಣ ಸರಿಪಡಿಸುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಎರಡನೆಯದಾಗಿ ಅವರು ಒಂದು ಸಾವಿರ ಹಸಿರುಕಾರ್ಡ್‌ನ್ನು ವಾಪಸ್ಸು ಪಡೆಯಲಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರು ಡಿಟೇಲ್ಸ್ ಕೊಟ್ಟರೆ ಖಂಡಿತವಾಗಿಯೂ ಆ ರೀತಿ ಆಗಿದ್ದರೆ ಅದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡುತ್ತೇನೆ. ಯಾರಿಗೆ ಸಿಗಬೇಕೋ ಅವರಿಗೆ ಸಿಗದೆ ಅನುಕೂಲಸ್ಥರಿಗೆ ಸಿಕ್ಕಿದರೆ ಅವರಿಂದ ವಾಪಸ್ಸು ಪಡೆಯುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಇದರ ಬಗ್ಗೆ ಏನು ಭಾಷಣ ಮಾಡಿದರು ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ, ಅದಕ್ಕೆ ಸರಿಯಾಗಿ ಉತ್ತರವನ್ನೂ ಕೊಟ್ಟಿದ್ದೇನೆ.

ಕೊನೆಯದಾಗಿ ಹೇಳುವುದಾದರೆ ಮಾನ್ಯ ಸದಸ್ಯರು ಇದೇ ರೀತಿಯಾಗಿ ಎಲ್ಲಾ ಕಡೆಯೂ ಆಗಿದೆ ಎಂದು ಹೇಳಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ ನಡೆದಿರತಕ್ಕಂಥ ವಿದ್ಯಮಾನಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇರುವಾಗ ಇನ್ನು ೧೬೫ ತಾಲ್ಲೂಕುಗಳಲ್ಲೂ ಹೀಗೇ ನಡೆದಿದೆ ಎಂದು ಹೇಳಿದರೆ, ಅವರು ಇದರ ಬಗ್ಗೆ ಮೊಗಂ ಆಗಿ ಹೇಳಿದ್ದಾರೆ ಎಂದು ಹೆಳಬೇಕಾಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ಅರ್ಹತೆ ಇದ್ದವರಿಗೆ ಇದು ಸಿಗಬೆಕು, ಅಂಥವರಿಗೆ ಇದರಿಂದ ನಿರಾಸೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರಿಗೆ ಏತಕ್ಕೆ ನಿರಾಸೆ ಬಂದಿದೆಯೋ ಏನೋ ಗೊತ್ತಿಲ್ಲ. ಇದರಲ್ಲಿ ಬೇರೆ ಏನಾದರೂ ರಾಜಕೀಯ ಕಾರಣಗಳು ಇದ್ದರೆ ಅವರು ನಿರಾಸೆಯಾಗಿರಬಹುದು. ನಾನು ಈ ಖಾತೆಯನ್ನು ವಹಿಸಿಕೊಂಡು ಒಂದೂವರೆ ತಿಂಗಳಾಯಿತು. ನಾನು ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಹೋಗಿದ್ದೇನೆ. ನಮ್ಮ ಅಧಿಕಾರಿಗಳ ಮುಖಾಂತರ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನೂ ಮತ್ತು ಎಲ್ಲಾ ದೂರುಗಳನ್ನೂ ಕೇಳಿ ತಿಳಿದುಕೊಂಡಿದ್ದೇನೆ. ಅದನ್ನು ಯಾವ ರೀತಿಯಾಗಿ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ರೀತಿಯಾಗಿ ತೆಗೆದುಕೊಂಡಿದ್ದಾರೆ. ಇವೆಲ್ಲಾ ನಾನು ನೋಡಿಕೊಂಡು ಬಂದಿದ್ದೇನೆ. ಆದುದರಿಂದ ಸನ್ಮಾನ್ಯ ಸದಸ್ಯರಲ್ಲಿ ನಾನು ವಿನಯವಿ ಮಾಡಿಕೊಳ್ಳುತ್ತೇನೆ, ಖಂಡಿತವಾಗಿಯೂ ಹೇಳುತ್ತೇನೆ, ಇಂಥ ಕಡೆ, ಇಂಥ ಊರಿನಲ್ಲಿ ಆ ಬಗ್ಗೆ ಹೆಸರು ಗೊತ್ತಿದ್ದರೆ, ಆ ಹೆಸರು ಕೊಟ್ಟರೂ ಸಂತೋಷ ಅದನ್ನು ತಿಳಿಸಿದರೆ ಅದರ ಬಗ್ಗೆ ಪರಿಶೀಲನೆ ಮಾಡಿ ಕರೆಕ್ಟೀವ್ ಮೆಷರ್ಸ್ ಆಗಿ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಮಾನ್ಯ ಲಕ್ಕಪ್ಪನವರಿಗೆ ಇದರ ಬಗ್ಗೆ ಸರ್ಕಾರದ ನೀತಿ ಏನು ಎನ್ನುವುದನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಅಕಸ್ಮಾತ್ ಆಗಿ ಅಲ್ಲೊಂದು ಇಲ್ಲೊಂದು ಬದಲಾವಣೆಯಾಗಿದ್ದರೆ, ಅಥವಾ ಅನರ್ಹರಾಗಿದ್ದವರಿಗೆ ಈ ಹಸಿರುಕಾರ್ಡ್ ಸಿಕ್ಕಿದ್ದರೂ ಕೂಡ ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ಇದರ ಅರ್ಹತೆ ಇದ್ದವರಿಗೆ ಇದು ಸಿಗಲೇಬೇಕು ಎನ್ನುವುದು ಸರ್ಕಾರದ ಇಚ್ಛೆ, ಅಂಥವರಿಗೆ ಇದು ತಪ್ಪಕೂಡದು. ಇದು ಸರ್ಕಾರದ ನೀತಿ. ಅಕಸ್ಮಾತ್ತಾಗಿ ಅನರ್ಹರಾಗಿದ್ದವರಿಗೆ ಅಲ್ಲೊಂದು ಇಲ್ಲೊಂದು ಸಿಕ್ಕಿದ್ದರೆ ಅದನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಅರ್ಹತೆ ಇರುವವರಿಗೆ ಈ ಹಸಿರು ಕಾರ್ಡ್ ಸಿಗಬೇಕು ಎಂದು ಹೇಳತಕ್ಕಂಥ ಮಾತು ಮೆಚ್ಚತಕ್ಕಂಥ ಮಾತು. ಅಷ್ಟಿ ತಪ್ಪಿ ಯಾರಿಗಾದರೂ ಇದು ಸಿಕ್ಕಿದ್ದರೆ ಅನರ್ಹರಾಗಿದ್ದವರಿಗೂ ಸಿಕ್ಕಿದ್ದರೆ Those who have got purchasing capacity ಅವರಿಗೆ ಹಸಿರು ಕಾರ್ಡ್ ಏನಾದರೂ ಹೋದರೂ ಕೂಡ ಅದರ ಬಗ್ಗೆ ಅಷ್ಟು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದರು. ಈ ವಿಷಯದಲ್ಲಿ ಅವರು ಖಚಿತವಾಗಿ ತಿಳಿಸಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಬಹಳ ಕಡೆಗಳಿಂದ ದೂರುಗಳು ಬಂದಿವೆ. ಆ ದೂರುಗಳನ್ನೆಲ್ಲಾ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ ನಾನು ಕೇಳುವುದು ಇಷ್ಟೆ. ಎಲ್ಲಿ ಅನರ್ಹರು ಜಾಸ್ತಿ ಇದ್ದಾರೆ ಅಂಥವರಿಗೆ ನೀವೇನಾದರೂ ಹಸಿರು ಕಾರ್ಡ್ ಜಾಸ್ತಿ ಕೊಟ್ಟಿದ್ದರೆ ಸರ್ಕಾರದವರು ಏನು

ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ ? ಅರ್ಹರಾದವರಿಗೆ ಈ ಕಾರ್ಡ್ ಸಿಗಬೇಕು ನಿಜ, ಆದರೆ ಅವರಲ್ಲೇ ಅನೇಕರಿಗೆ ಕೊಟ್ಟಿಲ್ಲ. ಅನರ್ಹರಾಗಿದ್ದವರಿಗೆ ಅಲ್ಲೊಂದು ಇಲ್ಲೊಂದು ಅಕ್ಕಿ ತಪ್ಪಿ ಕೊಟ್ಟಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ ಅದೇ ರೀತಿಯಾಗಿ ಜಾಸ್ತಿ ಕೊಟ್ಟಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಅರ್ಹರಾದವರಿಗೆ ಯಾರಿಗೆ ಸಿಕ್ಕಿಲ್ಲವೋ ಅವರಿಗೆ ಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅನರ್ಹರಾಗಿದ್ದವರಿಗೆ ಈ ಹಸಿರು ಕಾರ್ಡ್ ಜಾಸ್ತಿ ಸಂಖ್ಯೆಯಲ್ಲಿ ಕೊಟ್ಟಿದ್ದರೆ ಮತ್ತು ಅನುಕೂಲಸ್ಥರಿಗೆ ಇದು ಜಾಸ್ತಿ ಸಿಕ್ಕಿದ್ದರೆ ಅಲ್ಲಿಯ ವಿದ್ಯಮಾನಗಳನ್ನು ಪರಿಶೀಲಿಸಿ ಅದನ್ನು ಗಮನಕ್ಕೆ ತೆಗೆದುಕೊಂಡು ಅದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗಲೂ ಈ ಸದನದ ಮುಖಾಂತರ ನಮ್ಮ ರಾಜ್ಯದ ಜನತೆಯಲ್ಲಿ ಅಪೀಲು ಮಾಡಿಕೊಳ್ಳುತ್ತೇನೆ ಅನರ್ಹರಾಗಿದ್ದವರಿಗಾಗಲಿ ಅಥವಾ ಅನುಕೂಲಸ್ಥರಿಗಾಗಲಿ ಇಂತ ಕಾರ್ಡ್ ಸಿಕ್ಕಿದ್ದರೆ ಅವರು ಸರ್ಕಾರಕ್ಕೆ ತಾವಾಗಿಯೇ ಬಂದು ಸರೆಂಡರ್ ಮಾಡಬೇಕು. ಆದರೆ ಬಡವರಿಗೆ ಕೊಟ್ಟಿರತಕ್ಕಂಥ ಹಸಿರುಕಾರ್ಡ್‌ನ್ನು ಕಸಿದುಕೊಳ್ಳತಕ್ಕಂಥದ್ದು ಒಳ್ಳೆಯದಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಮನವಿ ಮಾಡಿಕೊಂಡರೆ ತೆಗೆದುಕೊಂಡವರು ಸರೆಂಡರ್ ಮಾಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಸರೆಂಡರ್ ಮಾಡದೇ ಹೋದರೆ ಕರೆಕ್ಟೀವ್ ಮೆಜರ್ಸ್ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೋ ಆರೀತಿ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದು ಏನೆಂದರೆ ಅರ್ಹರಿಗೆ ಇಷ್ಟು. ಅನರ್ಹರಿಗೆ ಇಷ್ಟು ಎಂದು ಶೇಕಡವಾರು ಇಷ್ಟು ಎಂದು ಫಿಕ್ಸ್ ಮಾಡಿಬಿಡಿ. ಈಗ ಇದರ ಬಗ್ಗೆ ದೂರು ಬಂದು ಮತ್ತೆ ಅದನ್ನು ರಿವಿಷನ್ ಮಾಡಿದ ಮೇಲೆ ಪುತ್ತಷ್ಟು ಪರ್ಸೆಂಟೇಜ್ ಜಾಸ್ತಿಯಾಯಿತು, ಅನರ್ಹರಾಗಿದ್ದವರಿಗೇ, ಅನುಕೂಲಸ್ಥರಿಗೇ ಜಾಸ್ತಿ ಕೊಟ್ಟುಬಿಟ್ಟಿದ್ದಾರೆ. ಇದರ ಬಗ್ಗೆ ಡಿಸ್ಕ್ರಿಷನ್ ಮಾಡುವವರು ಯಾರು ಎಂದರೆ ಅಲ್ಲಿಯ ಲೋಕಲ್ ಆಫೀಸರ್ಸ್. ಅವರು ಈ ಕೆಲಸ ಮಾಡಲಿಕ್ಕೆ ಹೊರಟಿದ್ದಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ಖರಾರುವಕ್ಕಾಗಿ ಶೇಕಡಾವಾರು ಪರ್ಸೆಂಟೇಜ್ ಫಿಕ್ಸ್ ಮಾಡಲಿಕ್ಕೆ ಬರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಬಡವರು ಜಾಸ್ತಿ ಇದ್ದಾರೆ. ಉದಾಹರಣೆಗೆ ಕೋಲಾರ ತೆಗೆದುಕೊಳ್ಳಿ.

ಶ್ರೀ ಕೆ. ಎಚ್. ಪಾಟೀಲ್.—ಕಾರವಾರ ಆಗುವುದಿಲ್ಲವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಅದೂ ಇರಬಹುದು. ಕೆಲವು ಜಿಲ್ಲೆಗಳಲ್ಲಿ ಬಡವರ ಸಂಖ್ಯೆ ಜಾಸ್ತಿ ಇದೆ. ಅಲ್ಲಿ ಶೇಕಡಾವಾರು ೫೦ ಪರ್ಸೆಂಟ್ ಎಂದು ನಿಗದಿ ಮಾಡುವುದಕ್ಕೆ ಬರುವುದಿಲ್ಲ. ಎಡಜನೆಯ ದಾಗಿ ಇದರ ಬಗ್ಗೆ ತಮಗೆಲ್ಲಾ ತಿಳಿದ ಹಾಗೆ ದೂರುಗಳು ಬಂದಾಗ ಇದನ್ನು ರಿವೈಸ್ ಮಾಡಿದಾಗ ಇನ್ನು ೧೦ ಲಕ್ಷ ಕುಟುಂಬಗಳಿಗೆ ಪ್ರಯೋಜನವಾಗಿದೆ. ಮೊದಲು ಮಾಡಿರತಕ್ಕಂಥದ್ದು ಯಾವ ಆಧಾರದ ಮೇಲೆ ಎಂದರೆ ಐ.ಆರ್.ಡಿ.ಪಿ. ಪ್ರೋಗ್ರಾಮಿನಲ್ಲಿ ಯಾವ ಒಂದು ಕ್ರೈಟೀರಿಯಾ ಇತ್ತೋ ಅದರ ಒಂದು ಆಧಾರದ ಮೇಲೆ ಮಾಡಿದ್ದುದು. ಈಗ ಅವನ್ನು ಬದಲಾವಣೆ ಮಾಡಿ ಒಂದು ಹೊಸ ಸ್ಕೀಂ ಮಾಡಿದ್ದೇವೆ. ಅದರ ಆಧಾರದ ಮೇಲೆ ಮಾಡುವಾಗ ಕೆಲವು ಕಡೆಗಳಲ್ಲಿ ಕೆಲವು ಲೋಪದೋಷಗಳು ಆಗಿದೆ. ಅದನ್ನೇ ದೊಡ್ಡತಪ್ಪು ಎಂದು ತಿಳಿದುಕೊಳ್ಳಬಾರದು, ಎಲ್ಲೆ ತಪ್ಪು ಇದೆಯೋ ಅದನ್ನು ಸರಿಪಡಿಸೋಣ.

ಶ್ರೀ ಪಂಪಾಪತಿ.—ಸ್ವಾಮಿ, ಕೊಳಚೆ ಪ್ರದೇಶಗಳಲ್ಲಿ ಇರತಕ್ಕಂಥ ಜನ ಬಹಳ ಬಡವರು. ಅವರು ಬೇರೆ ಬೇರೆ ರಾಜ್ಯಗಳಿಂದ ಬಂದಿರತಕ್ಕಂಥಾವರು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬಂದಿರ ತಕ್ಕಂಥವರು. ಅವರು ಜೀವನ ಮಾಡುವುದಕ್ಕೆ ಬಹಳ ತೊಂದರೆ ಇದೆ. ಅವರಿಗೆ ಬಹಳ ಕಷ್ಟ. ಆದುದರಿಂದ ಆ ಕೊಳಚೆ ಪ್ರದೇಶಗಳಲ್ಲಿರತಕ್ಕಂಥ ಜನರು ಏನು ಇದ್ದಾರೆ ಅವರನ್ನು ಗುರುತಿಸಿ, ಈ ಹಸಿರು ಕಾರ್ಡನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹೊಸದಾಗಿ ಬಂದಿರತಕ್ಕಂಥ ಆ ಜನರು ಸಂಬಂಧಪಟ್ಟ ಅಧಿಕಾರಿಗಳನ್ನು ನೋಡಿ ಅರ್ಜಿ ಸಲ್ಲಿಸಿ, ಅವರಿಂದ ಅನುಕೂಲ ಪಡೆದುಕೊಳ್ಳುವುದರಲ್ಲಿ ಏನೂ ತೊಂದರೆ ಇಲ್ಲ.

ಅವರು ಅನುಕೂಲ ಮಾಡಿಕೊಳ್ಳಬಹುದು. ಈ ಒಂದು ಯೋಜನೆಯಿಂದ ೩೦ ಲಕ್ಷ ಜನರಿಗೆ ಅನುಕೂಲ ವಾಗುವಾಗ ಈ ಸಣ್ಣಪುಟ್ಟ ನ್ಯೂನತೆಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೇವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಒಂದು ವಾರದಿಂದ ಶಿವಮೊಗ್ಗದ ಜಿಲ್ಲಾಧಿಕಾರಿ ಗಳನ್ನು ಸಂಪರ್ಕ ಮಾಡಿದ್ದೇನೆ. ಅಲ್ಲಿ ಎರಡನೆಯ ಸಾರಿ ಕಾರ್ಡುಗಳನ್ನು ಕೊಟ್ಟಿದ್ದಾರೆ. ಅವರಿಗೆ ಅಲಾಟ್‌ಮೆಂಟ್ ಆಗದೇ ಫಲಾನುಭವಿಗಳಿಗೆ ಪದಾರ್ಥಗಳು ಸಿಕ್ಕಿಲ್ಲ. ಈ ರೀತಿ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಇರಬಹುದು. ಆದ್ದರಿಂದ ತಾವು ಅಲಾಟ್‌ಮಾಡುವಂಥ ವ್ಯವಸ್ಥೆಯನ್ನೇ ಸರಿಯಾಗಿ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ನಾನು ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಕೊಶ್ಚನ್ ಅವರ್ ಮುಗಿದು ಮುಂದಕ್ಕೆ ಹೋಗಿದೆ, ತಾವು ಪ್ರಶ್ನೆ ಕೇಳಲು ಆಗುವುದಿಲ್ಲ.

ಅಧ್ಯಕ್ಷರು.—ತಾವು ೩ ಜನರೂ ಕೂಡಬೇಕು. ಕೊಶ್ಚನ್ ಅವರ್ ಮುಗಿದುಹೋಯಿತು ಎಂದು ಉಳಿದಿರುವ ಪ್ರಶ್ನೆಗಳನ್ನು ಲ್ಯಾಪ್ಸ್‌ಮಾಡಿ ಮುಂದಕ್ಕೆ ಹೋಗಬೇಕಾಗಿತ್ತು. ಆದರೆ ಲ್ಯಾಪ್ಸ್ ಮಾಡುವುದಿಲ್ಲ. ಇನ್ನೂ ೭ ಪ್ರಶ್ನೆಗಳಿವೆ, ಅವಕಾಶ ಕೊಡುತ್ತೇನೆ. ಈಗ ಮುಂದಿನ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಸಚಿವರು ರಾಜಕೀಯವಾಗಿ ಪ್ರಶ್ನೆ ಹಾಕಿದ್ದಾರೆಂದು ಹೇಳಿದರು. ನನ್ನ ಉದ್ದೇಶ ಏನೆಂದರೆ, ಸರ್ಕಾರದ ಕಾರ್ಯಕ್ರಮ ಏನು, ಅದರ ಪ್ರಕಾರ ನ್ಯಾಯವಾಗಿ ಬಡ ಜನರಿಗೆ ಈ ಫಲ ಸಿಕ್ಕಿಲ್ಲ ಎಂದು ಈ ಸದನದ ಸದಸ್ಯನಾಗಿ ಪ್ರಶ್ನೆ ಕೇಳಿದ್ದೇನೆಯೇ ವಿನಹ ಯಾವ ರಾಜಕೀಯ ಉದ್ದೇಶವನ್ನೂ ಇದರಲ್ಲಿ ಇಟ್ಟುಕೊಂಡಿಲ್ಲ. ಕಾರ್ಡುಗಳನ್ನು ವಾಪಸ್ ಪಡೆದು ಕೊಂಡಿಲ್ಲ ಎಂದು ಹೇಳಿದ್ದಾರೆ. ಒಂದು ಸಾವಿರ ಕಾರ್ಡುಗಳನ್ನು ವಾಪಸ್ ಪಡೆದಿದ್ದಾರೆ, ತನಿಖೆ ಮಾಡಿಸಲಿ.

ಶ್ರೀ ಎ. ಲಕ್ಷ್ಮೀಸಾಗರ್.—ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಪಾಟೀಲರೇ, ನಿಮ್ಮ ಪ್ರಶ್ನೆ (೧೧೨) ಮುಂದಕ್ಕೆ ಹೋಗಿದೆ.

ಅಫಜಲಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು

೩೫(೧೩೬) ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಅಫಜಲಪುರ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಹಾಗೂ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳಿವೆ?

(ಆ) ಅಫಜಲಪುರ ತಾಲ್ಲೂಕಿನ ಯಾವ ಯಾವ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇದೆ ?

(ಇ) ಈ ಕೊರತೆಯನ್ನು ತುಂಬಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

(ಈ) ಸ್ವಂತ ಕಟ್ಟಡವಿಲ್ಲದೆ ಸರ್ಕಾರದಿಂದ ಮಂಜೂರು ಆಗಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಕೆಲಸ ನಿರ್ವಹಿಸುತ್ತಿಲ್ಲವೆ?

(ಉ) ಹಾಗಿದ್ದಲ್ಲಿ ಆ ರೀತಿಯ ಎಷ್ಟು ಆರೋಗ್ಯ ಘಟಕಗಳಿವೆ?